ಎಸ್. ಸೂರ್ಯಪ್ರಕಾಶ ಪಂಡಿತ್



ಅಪಾರ ಅರ್ಥ, ಒಳನೋಟಗಳನ್ನು ಕೊಡುವ ಪುಟ್ಟ ಝೆನ್ ಕತೆಗಳನ್ನು ತಾತ್ವಿಕ ವಿವರಣೆಯೊಂದಿಗೆ ಇಲ್ಲಿ ಕೊಡಲಾಗಿದೆ

# ಚಂದ್ರನನ್ನೇ ಕೊಡುವಂತಿದ್ದರೆ?...

ಝೆನ್‌ಗುರು ರೋಯ್ಕನ್ ತುಂಬ ಸರಳಜೀವಿ. ಬಡತನವನ್ನೇ ಸಿರಿತನ ಎಂಬ ತುಂಬು ಜೀವನ ಅವನದ್ದು. ಪುಟ್ಟ ಗುಡಿಸಿಲಿನಲ್ಲಿ ಅವನು ಸಂತೋಷದಿಂದ ಜೀವನವನ್ನು ನಡೆಸುತ್ತಿದ್ದ. ಒಂದು ದಿನ ಕಳ್ಳನೊಬ್ಬ ಅವನ ಗುಡಿಸಿಲನ್ನು ಹೊಕ್ಕ. ಆದರೆ ಅಲ್ಲಿ ಅವನಿಗೆ ಏನೂ ಸಿಗದೆ ನಿರಾಶೆಗೊಂಡ. ಹೊರಗೆ ಹೋಗಿದ್ದ ಗುರು ಗುಡಿಸಲನ್ನು ಪ್ರವೇಶಿಸಿದ. ಕಳ್ಳ ಒಳಗಿದ್ದಾನೆ! ಕಳ್ಳ ಒಯ್ಯುವಂಥದ್ದು ತನ್ನ ಗುಡಿಸಿಲಿನಲ್ಲಿ ಏನೂ ಇಲ್ಲ ಎಂದು ಅವನಿಗೆ ಗೊತ್ತಿಲ್ಲವೆ? 'ಅಯ್ಯೋ, ನೀನು ಒಯ್ಯುವಂಥದ್ದು ಇಲ್ಲಿ ಏನೂ ಇಲ್ಲವಲ್ಲಪ್ಪ! ನಿನ್ನನ್ನು ಬರಿಗೈಯಲ್ಲಿಯೇ ಕಳುಹಿಸಬೇಕಾಗಿದೆಯೆಲ್ಲ' ಎಂದು ಪೇಚಾಡಿದ. ಅವನು ತೊಟ್ಟಿದ್ದ ಬಟ್ಟೆಗಳನ್ನೇ ಆ ಕಳ್ಳನಿಗೆ ಕಳಚಿಕೊಟ್ಟು 'ಇದನ್ನಾದರೂ ತೆಗೆದುಕೊಂಡು ಹೋಗು' ಎಂದ!!

ಕಳ್ಳನಿಗೆ ಗಾಬರಿಯಾಯಿತು. ರೋಯ್ಕನ್ ದಿಟವಾಗಿಯೂ ಕೊಡುತ್ತಿದ್ದಾನೆ ಎಂದು ಅನಿಸಿದ ಮೇಲೆ ಬಟ್ಟೆಗಳನ್ನು ತೆಗೆದುಕೊಂಡು ಹೊರಟ.

ಗುಡಿಸಿಲಿನ ಒಳಗಿಂದಲೇ ಕಾಣುತ್ತಿದ್ದ ಚಂದ್ರನನ್ನು ನೋಡುತ್ತ ಕುಳಿತ, ಬೆತ್ತಲಾಗಿದ್ದ ಝೆನ್‌ಗುರು ತನ್ನಲ್ಲಿ ತಾನೇ ಹೇಳಿಕೊಂಡ: 'ಪಾಪದವನು, ಅವನಿಗೆ ನಾನು ಚಂದ್ರನನ್ನೇ ಕೊಡಬಹುದಿತ್ತಲ್ಲವೆ?!'